ಮಂಡ್ಯ ಜಿಲ್ಲಾ ಪೊಲೀಸ್

## -: ಪತ್ರಿಕಾ ಪ್ರಕಟಣೆ :-

## ಅರಕೆರೆ ಪೊಲೀಸರ ಕಾರ್ಯಾಚರಣೆ ಸಾವಿನ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಕಳ್ಳನ ಬಂಧನ. 521 ಗ್ರಾಂ ತೂಕದ ಚಿನ್ನದ ಒಡವೆಗಳು ಸೇರಿದಂತೆ ಒಟ್ಟು 36,21,800/-ರೂ ಬೆಲೆಬಾಳುವ ವಸ್ತುಗಳ ವಶ.

ದಿನಾಂಕ 06-01-2024 ರಂದು ಅರಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಮಹದೇವಪುರ ಗ್ರಾಮದಲ್ಲಿ ಶಿವಕುಮಾರ್ ಎಂಬುವರು ಮೃತಪಟ್ಟಿದ್ದು ಸದರಿಯವರ ಶವ ಸಂಸ್ಕಾರಕ್ಕೆಂದು ಮೃತ ಶಿವಕುಮಾರನ ಅಣ್ಣನ ಮನೆಯವರೆಲ್ಲರೂ ದಪನ್ ಕಾರ್ಯಕ್ಕೆ ಹೋಗಿದ್ದಾಗ ಸದರಿಯವರ ಮನೆಯಲ್ಲಿ ಯಾರೋ ಕಳ್ಳರು ಮನೆಯ ಬೀರುವಿನಲ್ಲಿದ್ದ ಒಟ್ಟು 135 ಗ್ರಾಂ ತೂಕದ ಚಿನ್ನದ ಒಡವೆಗಳು ಕಳ್ಳತನವಾಗಿದ್ದು ಈ ಬಗ್ಗೆ ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲ್ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿತ್ತು.

ಇದೇ ಮಾದರಿಯಲ್ಲಿ ಈಗ್ಗೆ ಸುಮಾರು 6 ತಿಂಗಳಿನಿಂದ ಪಾಂಡವಪುರ ತಾಲ್ಲೋಕಿನ ಹಿರೆಮರಳಿ, ಚಿನಕುರುಳಿ, ಆರತಿಉಕ್ಕಡ, ಹರವು, ಡಾಮಡಹಳ್ಳಿ ಗ್ರಾಮಗಳಲ್ಲಿ ಕಳ್ಳತನದ ಪ್ರಕರಣ ಸಾವಿನ ಮನೆಯಲ್ಲಿಯೇ ನಡೆದಿದ್ದರಿಂದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಯತೀಶ್.ಎನ್ ರವರು ಅಪರ ಜಿಲ್ಲಾ ಪೊಲೀಸ್ ಅದೀಕ್ಷಕರಾದ ಶ್ರೀ ತಿಮ್ಮಯ್ಯ, ಶ್ರೀ ಎಸ್.ಇ.ಗಂಗಾಧರಸ್ವಾಮಿ ರವರ ಮಾರ್ಗದರ್ಶನದಲ್ಲಿ ಶ್ರೀರಂಗಪಟ್ಟಣ ಉಪ ವಿಭಾಗದ ಉಪಾದೀಕ್ಷಕರಾದ ಶ್ರೀ ಮುರುಳಿ ರವರ ನೇತೃತ್ವದಲ್ಲಿ ಶ್ರೀಪುನಿತ್ ಟಿ.ಎಂ. ಸರ್ಕಲ್ ಇನ್ಸ್‌ಪೆಕ್ಟರ್, ಕೆ.ಆರ್.ಸಾಗರ ವೃತ್ತ, ಶ್ರೀ ಎಂ.ಆರ್.ಬ್ಯಾಳಿ, ಪಿಎಸ್.ಐ ಹಾಗೂ ಸಿಬ್ಬಂದಿಗಳ ನೇತೃತ್ವದಲ್ಲಿ ತಂಡವನ್ನು ರಚನೆ ಮಾಡಿಕೊಂಡು ಆರೋಪಿಗಳ ಪತ್ತೆಯ ಬಗ್ಗೆ ಕ್ರಮ ಕೈಗೊಂಡು ಸದರಿ ತಂಡವು ಆರೋಪಿಯನ್ನು ಪತ್ತೆ ಮಾಡಿದ್ದು.

### ಪತ್ತೆಯಾದ ಪ್ರಕರಣಗಳ ವಿವರ:-

1. ಅರಕೆರೆ ಪೊಲೀಸ್ ಠಾಣಾ ಮೊ.ನಂ.03/2024 ಕಲಂ.454, 380 ಐಪಿಸಿ.
2. ಅರಕೆರೆ ಪೊಲೀಸ್ ಠಾಣಾ ಮೊ.ನಂ.06/2021 ಕಲಂ.454, 457, 380 ಐಪಿಸಿ
3. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ.149/2023 ಕಲಂ.380 ಐಪಿಸಿ
4. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ.224/2023 ಕಲಂ.380 ಐಪಿಸಿ
5. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ.10/2024 ಕಲಂ.380 ಐಪಿಸಿ.
6. ಪಾಂಡವಪುರ ಪೊಲೀಸ್ ಠಾಣಾ ಮೊ.ನಂ.229/2023 ಕಲಂ.380 ಐಪಿಸಿ
7. ಪಾಂಡವಪುರ ಪೊಲೀಸ್ ಠಾಣಾ ಮೊ.ನಂ.14/2024 ಕಲಂ.380 ಐಪಿಸಿ
8. ಕೆ.ಆರ್.ಸಾಗರ ಪೊಲೀಸ್ ಠಾಣಾ ಮೊ.ನಂ.89/2023 ಕಲಂ 380 ಐಪಿಸಿ
9. ಮೈಸೂರು ಸಿಟಿ ವಿ.ವಿ.ಪುರಂ ಪೊಲೀಸ್ ಠಾಣಾ ಮೊ.ನಂ.19/2023 ಕಲಂ 380 ಐಪಿಸಿ
10. ಮೈಸೂರು ಸಿಟಿ ದೇವರಾಜ ಪೊಲೀಸ್ ಠಾಣಾ ಮೊ.ನಂ.02/2024 ಕಲಂ 379 ಐಪಿಸಿ

ಆರೋಪಿಯು ನೀಡಿದ ಸುಳಿವಿನ ಮೇರೆಗೆ ಆರೋಪಿಯಿಂದ ಈ ಕೆಳಕಂಡ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೆ.

1. ಒಟ್ಟು 521 ಗ್ರಾಂ ಚಿನ್ನದ ಒಡವೆಗಳು ಒಟ್ಟು- 30,21,800/-
2. ಕ್ಯಾಮರಾ ಮತ್ತು ಲೆನ್ಸ್‌ಗಳು ಒಟ್ಟು-3,50,000/-
3. ಒಂದು ಬೈಕ್ -50,000/-
4. ಒಂದು ಕಾರು -2,00000/-

ಒಟ್ಟು ಮೌಲ್ಯ **36,21,800/-**ಗಳನ್ನು ಅಮಾನತ್ತು ಪಡಿಸಿಕೊಂಡಿತ್ತೆ.

ಮೇಲ್ಕಂಡ ಪ್ರಕರಣಗಳಲ್ಲಿ ಆರೋಪಿ ಮತ್ತು ಮಾಲನ್ನು ಪತಪಡಿಸಿಕೊಳ್ಳಲು ಶ್ರಮಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ತಂಡವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಯತೀಶ್.ಎನ್, ಐ.ಪಿ.ಎಸ್ ರವರು ಪ್ರಶಂಶಿಸಿರುತ್ತಾರೆ.


ಅರಕೆರೆ ಪೊಲೀಸ್ ಠಾಣೆ